ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-6, May – June 2026, Pp. 17-25
©*IIMRD*, Mysuru
www.iimrd.com

# ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರ

**ನಿಂಗಪ್ಪ ಪ. ಮಾದರ[1] ಮತ್ತು ಡಾ. ಬಿ.ಎಮ್.ರತ್ನಾಕರ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಸಾರಾಂಶ: (Abstract)**

*ಭಾರತದಲ್ಲಿ ಗ್ರಾಮೀಣಾಭಿವೃದ್ಧಿಯು ಒಂದು ಪ್ರಮುಖ ಪ್ರಕ್ರಿಯೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬಡ ಮತ್ತು ದುರ್ಬಲ ವರ್ಗದ ಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಸುಧಾರಿಸಲು ಸ್ವಸಹಾಯ ಗುಂಪುಗಳು ಸಹಾಯ ಮಾಡುತ್ತದೆ. ಈ ಅಧ್ಯಯನವು ಗ್ರಾಮೀಣ ಅಭಿವೃದ್ಧಿಯಲ್ಲಿ ಸ್ವಸಹಾಯ ಗುಂಪುಗಳ ಸಾಮಾಜಿಕ–ಆರ್ಥಿಕ ಸ್ಥಿತಿ ಮತ್ತು ಗ್ರಾಮೀಣ ಅಭಿವೃದ್ಧಿಯ ಮೇಲೆ ಅದರ ಪ್ರಭಾವವನ್ನು ಕೇಂದ್ರೀಕರಿಸಿದೆ. ಸ್ವಸಹಾಯ ಗುಂಪುಗಳ ಈ ವಿಧಾನವು ಗ್ರಾಮೀಣ ಪ್ರಗತಿಯ ಕ್ಷೇತ್ರದಲ್ಲಿ ಮಹತ್ವದ ಅಂಶವಾಗಿದ್ದು, ಇದು ಕಾರ್ಯಚಟುವಟಿಕೆಯನ್ನು ಆಧಾರಿತ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಬಡವರ ದಿನನಿತ್ಯದ ಪರಿಸರವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಸ್ವಸಹಾಯ ಗುಂಪುಗಳು ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ನಡೆಸುವ ಮೂಲಕ ಮಹಿಳೆಯರಿಗೆ ಹಣಕಾಸಿನ ಅನುಕೂಲಗಳನ್ನು ನೀಡುವಲ್ಲಿ ಸಹಾಯಕವಾಗಿವೆ.*

**ಮುಖ್ಯಪದಗಳು (Keywords):** *ಗ್ರಾಮೀಣಾಭಿವೃದ್ಧಿ, ಬಡತನ, ಅಭಿವೃದ್ಧಿ, ಸ್ವಸಹಾಯ ಗುಂಪುಗಳು, ಆರ್ಥಿಕತೆ, ಸಾಲ–ಸೌಲಭ್ಯ, ಮಹಿಳಾ ಸಬಲೀಕರಣ*

## ಪೀಠಿಕೆ

ರಾಷ್ಟ್ರದ ಅಭಿವೃದ್ಧಿಯು ಗ್ರಾಮೀಣ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ. ಸ್ವಸಹಾಯ ಗುಂಪು (SHG) ಎಂಬುದು ಬಹುತೇಕ, ಒಂದೇ ರೀತಿಯ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯಲ್ಲಿರುವ ಪುರುಷರ ಮತ್ತು ಮಹಿಳೆಯರ ಸ್ವಯಂಪ್ರೇರಿತ ಗುಂಪಾಗಿದೆ. ಸ್ವಸಹಾಯ ಗುಂಪುಗಳು ಯಾವುದೇ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಕ್ಕಾಗಿ ರಚಿಸಲಾದ, 10 ರಿಂದ 25 ಜನರ ಒಂದು ಗುಂಪುಗಳಾಗಿದ್ದು, ಇದು ತನ್ನ ಸದಸ್ಯರ ಉತ್ತಮ ಆರ್ಥಿಕ ಭದ್ರತೆಯ ಉದ್ದೇಶಕ್ಕಾಗಿ ರಚಿಸಲಾಗಿದೆ. ಸ್ವಸಹಾಯ ಗುಂಪುಗಳು ನೋಂದಣಿಯೊಂದಿಗೆ ಅಥವಾ ಇಲ್ಲದೆ ಅಸ್ತಿತ್ವದಲ್ಲಿರಬಹುದು. ಇಲ್ಲಿ ಗುಂಪಿನ ಸದಸ್ಯರು ತಮ್ಮದೇ ಆದ ಸಾಲದ ಪ್ರಕ್ರಿಯೆಯನ್ನು ಪ್ರಾರಂಭಿಸಲು, ಗುಂಪಿನಲ್ಲಿ ಸಾಕಷ್ಟು ಬಂಡವಾಳವನ್ನು ಹೊಂದುವವರೆಗೆ, ಸಣ್ಣ ಪ್ರಮಾಣದ ಉಳಿತಾಯವನ್ನು ಸಂಗ್ರಹಿಸುತ್ತಾರೆ. ನಂತರ ಪರಸ್ಪರ ಹಂಚಿಕೆಯೊಂದಿಗೆ ಸಾಲ ಸೌಲಭ್ಯದ ಅವಕಾಶವನ್ನು

*Please cite this article as:* ನಿಂಗಪ್ಪ ಪ. ಮಾದರ ಮತ್ತು ಬಿ.ಎಮ್.ರತ್ನಾಕರ. (2026). ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(6). ಪು.ಸಂ.* 17–25

ಪಡೆಯುತ್ತಾರೆ. ಭಾರತದಲ್ಲಿ ಸ್ವಸಹಾಯ ಗುಂಪುಗಳು ಹೆಚ್ಚಾಗಿ ಬ್ಯಾಂಕುಗಳ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತವೆ.

**ಸ್ವಸಹಾಯ ಗುಂಪುಗಳ ಯಶಸ್ವಿ ಉದಾಹರಣೆಗಳು**

1. ಕೇರಳದ ಕುಟುಂಬಶ್ರೀ ಸಂಘಟನೆಯು ಮಹಿಳೆಯರಿಗೆ ಕೌಶಲ್ಯ ತರಬೇತಿ ಮತ್ತು ಬಡತನ ನಿರ್ಮೂಲನೆಯನ್ನು ಹೊಗಲಾಡಿಸುವಲ್ಲಿ ಸಹಾಯ ಮಾಡಿದೆ.
2. ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ, ಸಮುದಾಯದ ಜನರಲ್ಲಿ ನೈರ್ಮಲ್ಯ ಪದ್ಧತಿಯನ್ನು ಬೆಳೆಸಲು, ತಮಿಳುನಾಡು ರಾಜ್ಯವು ಸ್ವಸಹಾಯ ಗುಂಪುಗಳನ್ನು ಬಳಸಿಕೊಂಡಿತು.
3. ಹರಿಯಾಣ ಸರ್ಕಾರವು ಲಿಂಗಾನುಪಾತವನ್ನು ಹೆಚ್ಚಿಸಲು ಮತ್ತು 'ಬೇಟಿ ಬಚಾವೋ ಬೇಟಿ ಪಡಾವೋ' ಯೋಜನೆಯ ಕಾರ್ಯಕ್ರಮವು ಯಶಸ್ವಿಯಾಗಲು, ಸ್ವಸಹಾಯ ಗುಂಪುಗಳನ್ನು ಬಳಸಿಕೊಂಡಿತು.
4. ಸೇವಾ ಲಿಜ್ಜತ್ ಪಾಪಡ್‌ನಂತಹ ಸ್ವಸಹಾಯ ಗುಂಪುಗಳು, ಮಹಿಳೆಯರಲ್ಲಿ ಉದ್ಯಮಶೀಲ ಸಂಸ್ಕೃತಿಯನ್ನು ಉತ್ತೇಜಿಸುತ್ತವೆ.
5. ಕರ್ನಾಟಕ ಸರ್ಕಾರ ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ, ಸ್ವಸಹಾಯ ಗುಂಪುಗಳ ಮೂಲಕ ಮಹಿಳೆಯರನ್ನು ಆರ್ಥಿಕ ಉತ್ಪಾದನಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಿದೆ.

**ಅಧ್ಯಯನದ ಉದ್ದೇಶಗಳು**

1. ಸ್ವಸಹಾಯ ಗುಂಪುಗಳ ಆರ್ಥಿಕತೆ ಮತ್ತು ಆದಾಯದ ಮೂಲಗಳನ್ನು ತಿಳಿದುಕೊಳ್ಳುವದು.
2. ಗ್ರಾಮೀಣ ಅಭಿವೃದ್ಧಿ ಮತ್ತು ಬಡತನ ನಿರ್ಮೂಲನೆಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರವನ್ನು ಅವಲೋಕಿಸುವದು.

**ಅಧ್ಯಯನದ ವಿಧಾನ**

ಈ ಸಂಶೋಧನಾ ಲೇಖನವು, ಸಂಪೂರ್ಣವಾಗಿ ಮಾಧ್ಯಮಿಕ ದತ್ತಾಂಶವನ್ನು ಅವಲಂಬಿಸಿದ್ದು, ಗ್ರಾಮೀಣ ಅಭಿವೃದ್ಧಿ, ಮಹಿಳಾ ಸಬಲೀಕರಣ ಮತ್ತು ಸ್ವಸಹಾಯ ಗುಂಪುಗಳು ಸಂಬಂಧಿತ ಗ್ರಂಥಗಳು, ಪುಸ್ತಕಗಳು, ಸರ್ಕಾರದ ಯೋಜನೆಗಳು, ವರದಿಗಳು, ಲೇಖನಗಳು, ನಿಯತಕಾಲಿಕೆಗಳು ಮತ್ತು ಕೆಲವು ಗ್ರಂಥಗಳನ್ನು ಸಾಹಿತ್ಯಿಕ ಪರಾಮರ್ಶೆಯ ಮೂಲಕ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

**ಸಾಹಿತ್ಯಿಕ ಪರಾಮರ್ಶೆ**

ಬನಕಾರ್ ಮತ್ತು ಯತ್ನಳ್ಳಿ (2008), ಅವರು ತಮ್ಮ ಲೇಖನದಲ್ಲಿ, ಮಹಿಳಾ ಸ್ವಸಹಾಯ ಸಂಘಗಳು ಮುಖ್ಯವಾಗಿ ಬಡತನ ನಿರ್ಮೂಲನೆ, ಮಾನವ ಅಭಿವೃದ್ಧಿ ಮತ್ತು ಸಾಮಾಜಿಕ ಬೆಳವಣಿಗೆಗೆ ಕಾರಣವಾಗಿವೆ. ಮಾನವ ಅಭಿವೃದ್ಧಿಗೆ ಬಡತನ ಒಂದು ನಕಾರಾತ್ಮಕ ಅಂಶವಾಗಿದ್ದು, ಬಡವರಿಗೆ ಹಣಕಾಸಿನ ಸೇವೆ ಮತ್ತು ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವ ಸ್ವಸಹಾಯ ಗುಂಪುಗಳು ಗ್ರಾಮೀಣ

ಪ್ರದೇಶದಲ್ಲಿನ ಬಡವರ ಹಣಕಾಸಿನ ತುರ್ತು ಸಮಸ್ಯೆಗಳಿಗೆ ಹಣವನ್ನು ನೀಡುವ ಮೂಲಕ ಸ್ವಸಹಾಯ ಸಂಘಗಳು ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಿವೆ ಎಂದು ಹೇಳಲಾಗಿದೆ.[1]

ವೆಂಕಟೇಶ (2009), ಅವರು ತಮ್ಮ ಲೇಖನದಲ್ಲಿ, ಸ್ವಸಹಾಯ ಗುಂಪುಗಳು ವಿಶೇಷವಾಗಿ ಗ್ರಾಮೀಣ ಮಹಿಳೆಯರ ದುರ್ಬಲ ವರ್ಗದ ಮಹಿಳೆಯರಿಗೆ ಗ್ರಾಮೀಣ ಉದ್ಯಮಶೀಲತೆಯನ್ನು ಪ್ರಾರಂಭಿಸಲು, ಮಾನವ ಬಂಡವಾಳವನ್ನು ಮೌಲ್ಯಯುತವಾಗಿ ಹೂಡಿಕೆ ಮಾಡಲು, ಉತ್ತಮ ನೀತಿ ನಿಯಮ ರೂಪಿಸಲು ಮತ್ತು ತರಬೇತಿಯನ್ನು ನೀಡುವ ಮೂಲಕ ಗ್ರಾಮೀಣ ಭಾಗದ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮ ಪಡಿಸಲು ಸಹಾಯಕವಾಗಿವೆ. ಕುಟುಂಬದ ಆದಾಯ ಮತ್ತು ಗುಣಮಟ್ಟವನ್ನು ಹೆಚ್ಚಿಸುವ ಮೂಲಕ ಬಡತನವನ್ನ ಹೋಗಲಾಡಿಸಿ ಗ್ರಾಮೀಣ ಜನರನ್ನು ಸಬಲಗೊಳಿಸಲು ಸ್ವಸಹಾಯ ಸಂಘಗಳ ಕಾರ್ಯಕ್ರಮಗಳು ದೇಶಾದ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಜೈನ್ ಮತ್ತು ನೈ (2013), ಅವರು ಗ್ರಾಮೀಣ ಮಹಿಳೆಯರನ್ನು ಸಶಕ್ತಗೊಳಿಸಲು ಸ್ವಸಹಾಯ ಗುಂಪುಗಳು ಸಹಾಯ ಮಾಡುತ್ತಿದೆ' ಎಂಬ ಅಧ್ಯಯನದಲ್ಲಿ, ಸ್ವಸಹಾಯ ಗುಂಪುಗಳ(ಎಸ್ಎಚ್‌ಜಿ) ಮುಖಾಂತರ ಮಹಿಳಾ ಸಶಕ್ತತೆಗೆ ಅನುಕೂಲವಾಗುವ ಕಾರಣಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ. ಸ್ವಸಹಾಯ ಗುಂಪುಗಳಿಗೆ ಮಹಿಳೆಯರು ಸೇರಿದ ನಂತರ ಆರ್ಥಿಕ ಸ್ವಾಯತ್ತತೆ ಮತ್ತು ಒತ್ತಡವಿಲ್ಲದ ಜೀವನವನ್ನು ನಡೆಸುವ ಸಾಧ್ಯವಾಯಿತು. ಮುಂದುವರೆದೂ, ಗ್ರಾಮೀಣ ಪ್ರದೇಶದಲ್ಲಿ ಜನರು ಆರ್ಥಿಕವಾಗಿ ಸಶಕ್ತಗೊಳಿಸುವಲ್ಲಿ ಸ್ವಸಹಾಯ ಗುಂಪುಗಳು ಬಹಳವಾಗಿ ನೆರವಾಯಿತು.[2]

ಶರ್ಮಾ(2012), ಮೈಕ್ರೋ–ಫೈನಾನ್ಸ ಹಾಗೂ ಸ್ವಸಹಾಯ ಗುಂಪುಗಳು ಮಹಿಳೆಯರು ಸಾಮಾಜಿಕ–ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂಬುದನ್ನು ತಿಳಿಸಿದ್ದಾರೆ. ಒಂದು ದೇಶದ ಪ್ರಗತಿಯು ಅಲ್ಲಿನ ಮಹಿಳೆಯರ ಸ್ಥಾನವನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ, ಸ್ವಸಹಾಯ ಗುಂಪುಗಳು ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವುದರ ಜೊತೆಗೆ ಅವರನ್ನು ಸಾಕ್ಷರರನ್ನಾಗಿ ಮಾಡಿ ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಮಾಡಿದೆ. ಇದು ಮಹಿಳೆಯರು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ಸಹಾಯಕವಾಗಿದೆ.[3]

ಭಾರತಿ (2008), ಇವರು ತಮ್ಮ ಲೇಖನದಲ್ಲಿ, ಸ್ವಸಹಾಯ ಗುಂಪುಗಳು ಅಭಿವೃದ್ಧಿಯ ಸಂಕೇತಗಳಾಗಿವೆ. ಸರ್ಕಾರಗಳು ವಿವಿಧ ಯೋಜನೆಗಳಿಗೆ ಹಣವನ್ನು ಖರ್ಚು ಮಾಡುವುದರ ಜೋತೆಗೆ ಸ್ವಸಹಾಯ ಗುಂಪುಗಳ ರಚನೆ ಮತ್ತು ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ಅವುಗಳ ಬಲಿಷ್ಠತೆಗೆ

---

[1] ಬಣಕಾರ್ ಎಮ್., ಸಿ.ಎಸ್, ಯತ್ನಳ್ಳಿ. (2008). ಸೆಲ್ಫ್ ಹೆಲ್ಪ್ ಗ್ರೂಪ್ಸ್ ಅಂಡ್ ಎಂಪವರ್‌ಮೆಂಟ್ ಆಫ್ ವುಮೆನ್: ಎ ಕೇಸ್ ಸ್ಟಡಿ ಆಫ್ ಹಾವೇರಿ ಡಿಸ್ಟ್ರಿಕ್.

[2] ಜೈನ್ ಆಂಡ್ ನೈ. (2013). ಸೆಲ್ಫ್ ಹೆಲ್ಪ್ ಗ್ರೂಪ್ಸ್ ಹೆಲ್ಪಿಂಗ್ ಎಂಪವರ್ ರೂರಲ್ ವುಮೆನ್ ಎ ಸ್ಟಡಿ, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೋಷಿಯಲ್ ಸೈನ್ಸ ಆಂಡ್ ಇಂಟರ್‌ಡಿಸಿಪ್ಲಿನರಿ ರಿಸರ್ಚ.

[3] ಶರ್ಮಾ, (2012). ವುಮೆನ್ ಎಂಪವರಮೆಂಟ್ ಥ್ರೋ ಮೈಕ್ರೋ ಫೈನಾನ್ಸ ಆಂಡ್ *ಸೆಲ್ಫ್ ಹೆಲ್ಪ್ ಗ್ರೂಪ್ಸ್*, ಸೋನಾಲಿ ಪಬ್ಲಿಕೇಷನ್, ನ್ಯೂ ದೆಹಲಿ.

ಒತ್ತು ನೀಡಬೇಕು. ಸಂಘಗಳು ಸಬಲೀಕರಣವಾದಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತವೆ. ಆ ಮೂಲಕ ರಾಷ್ಟ್ರದ ನಿರುದ್ಯೋಗ, ಬಡತನದಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[4]

ರಾಜಶ್ರೀ (2011), ಇವರು ತಮ್ಮ ಲೇಖನದಲ್ಲಿ, ಸಣ್ಣ ಹಣಕಾಸಿನ ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ಗ್ರಾಮೀಣ ಬಡತನವನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಸ್ವಸಹಾಯ ಗುಂಪುಗಳ ಮೂಲಕ ಕಿರು ಹಣಕಾಸಿನ ಪರಿಕಲ್ಪನೆಯು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗದ ಜನರ ಅಭಿವೃದ್ಧಿಯಲ್ಲಿ ಹೊಸ ಆಯಾಮನ್ನು ಸೃಷ್ಟಿಸುತ್ತದೆ. ಸಾಲ–ಸೌಲಭ್ಯಗಳು ಗ್ರಾಮೀಣ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಯಾಗಲು ಮಹಿಳೆಯರು ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಬಲೀಕರಣಕ್ಕಾಗಿ ಕಾರಣವಾಗಿದೆ. ಕಿರು ಹಣಕಾಸು ಯೋಜನೆಯು ಮಹಿಳೆಯರ ಉತ್ಪಾದಕತೆಯಲ್ಲಿ ತೊಡಗುವಂತೆ ಮಾಡುವದು ಜೊತೆಗೆ ಸಬಲೀಕರಣ ಮತ್ತು ಅಭಿವೃದ್ಧಿಯ ಈ ಎರಡು ಅಂಶಗಳು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[5]

ಸಂಕ್ಷಿಪ್ತವಾಗಿ ಹೇಳುವುದಾದರೆ, ಗ್ರಾಮೀಣಾಭಿವೃದ್ಧಿ ಪ್ರಕ್ರಿಯೆಯಲ್ಲಿ, ಸಮಾಜವು ತಮ್ಮ ತಮ್ಮ ಅಭಿವೃದ್ಧಿಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು, ವಿವಿಧ ಗುಂಪುಗಳಿಗೆ/ಸಂಘಗಳಾಗಿ ಸಂಘಟಿತವಾಗಬೇಕಾಗಿದೆ ಎಂದು ಸಾಹಿತ್ಯದ ವ್ಯಾಪಕ ವಿಮರ್ಶೆಯು ವಿವರಿಸುತ್ತದೆ. ಸ್ವಸಹಾಯ ಗುಂಪುಗಳು, ಬಡ ಜನರಲ್ಲಿ ಜಾಗೃತಿಯನ್ನು ಉತ್ತೇಜಿಸುವ, ಕೆಲವು ಸಂಸ್ಥೆಗಳಾಗಿದ್ದು, ಅವರ ಕ್ರಿಯಾತ್ಮಕ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ವಿಸ್ತರಿಸಲು ಮತ್ತು ಅವರ ಇತ್ತೀಚಿನ ಜೀವನದಲ್ಲಿ ಅವರು ಹೆಚ್ಚಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

**ಗ್ರಾಮೀಣ ಅಭಿವೃದ್ಧಿಯಲ್ಲಿ ಸ್ವಸಹಾಯ ಗುಂಪಿನ ಪಾತ್ರ:**

1. **ಸಾಲ ಲಭ್ಯತೆ**: ಬ್ಯಾಂಕಿನ ಸಾಲಗಳು ಬಡವರಿಗೆ ಸುಲಭವಾಗಿ ಲಭ್ಯವಾಗುವುದಿಲ್ಲ, ಆದರೆ ಸ್ವಸಹಾಯ ಗುಂಪುಗಳ ಸದಸ್ಯರಾಗುವುದರಿಂದ ಸುಲಭವಾಗಿ ಸಾಲ ಸೌಲಭ್ಯಗಳನ್ನು ಪಡೆಯಲು ಉತ್ತಮ ಅವಕಾಶಗಳಿವೆ (ಮೇಲಾಧಾರವಿಲ್ಲದೆ).
2. **ಉದ್ಯಮಶೀಲತೆ:** ಸೂಕ್ಷ್ಮ ಹಣಕಾಸಿನ ಉದ್ಯಮವನ್ನು ಸ್ಥಾಪನೆಯ ಮೂಲಕ ಸ್ವಉದ್ಯೋಗಕ್ಕೆ ಅವಕಾಶಗಳಿವೆ.
3. **ಕೌಶಲ್ಯ ಅಭಿವೃದ್ಧಿ**: ಸ್ವಸಹಾಯ ಗುಂಪುಗಳು ಕೈಗೊಳ್ಳುವ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು ಸದಸ್ಯರಲ್ಲಿ ಸುಧಾರಿತ ಉದ್ಯೋಗವನ್ನು ಮಾಡಲು ಉತ್ತೇಜಿಸುತ್ತವೆ.

[4] ಪಾಟೀಲ ಭಾರತಿ. (2008). ಮಹಿಳಾ ಸಬಲೀಕರಣದಲ್ಲಿ ಅಥಣಿ ತಾಲೂಕು ಸ್ವಸಹಾಯ ಸಂಘಗಳು, ಎಂ.ಫಿಲ್ ಸಂಶೋಧನಾ ಗ್ರಂಥ, ಕನ್ನಡ ವಿಶ್ವವಿದ್ಯಾಲಯ.

[5] ರಾಜಶ್ರೀ ಗುದಗನವರ. (2011). ಗ್ರಾಮೀಣ ಅಭಿವೃದ್ಧಿಯಲ್ಲಿ ಕಿರು ಹಣಕಾಸು ಸಂಸ್ಥೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

4. **ಗ್ರಾಮೀಣ ಬಡತನ:** ಸ್ವಸಹಾಯ ಗುಂಪುಗಳು ಗ್ರಾಮೀಣ ಜನರನ್ನು ಬಡತನದಿಂದ ಹೊರಬರುವಂತೆ ಮಾಡಲು, ಸರ್ಕಾರ ಕೈಗೊಂಡಿರುವ ಕಲ್ಯಾಣ ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವದು ಮತ್ತು ಅದರ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಒಂದು ಸಾಧನವಾಗಿ ಮಾರ್ಪಟ್ಟಿವೆ.
5. **ಸುಧಾರಿತ ಜೀವನ ಮಟ್ಟಗಳು:** ಸ್ವಸಹಾಯ ಗುಂಪುಗಳಿಂದ ಹೆಚ್ಚಿದ ಉದ್ಯೋಗವಕಾಶಗಳ ಪರಿಣಾಮವಾಗಿ, ಸದಸ್ಯರ ಗುಣಮಟ್ಟದ ಆಹಾರ, ಸುಸ್ಥಿರ ಆರೋಗ್ಯ ಸೇವೆಗಳನ್ನು ಪಡೆದು ತಮ್ಮ ಜೀವನ ಶೈಲಿಯನ್ನು ಸುದಾರಿಸಿಕೊಳ್ಳಲು ಅವಕಾಶ ನೀಡಿವೆ.
6. **ಮಹಿಳಾ ಸಬಲೀಕರಣ**: 2ನೇಂಖಅ ವರದಿಯಲ್ಲಿ ಸೂಚಿಸಿದಂತೆ, ಉದ್ಯೋಗ ಅವಕಾಶಗಳು, ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವ ಮೂಲಕ ಸ್ವಸಹಾಯ ಗುಂಪುಗಳು ಮಹಿಳೆಯರ ಸ್ಥಾನಮಾನವನ್ನು ಸುಧಾರಿಸಲು ಮತ್ತು ಅವರ ಹಕ್ಕುಗಳು ಮತ್ತು ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸಲು ಸಹಾಯ ಮಾಡುತ್ತವೆ.
7. **ಸಾಕ್ಷರತಾ ದರಗಳು**: ಸ್ವಸಹಾಯ ಗುಂಪುಗಳಲ್ಲಿ ಹೆಚ್ಚಿನ ಮಹಿಳೆಯರು ಭಾಗವಹಿಸುವಿಕೆಯಿಂದ, ಸದಸ್ಯರ ಕುಟುಂಬದಲ್ಲಿನ ಸಾಕ್ಷರತೆಯ ಮಟ್ಟ ಹೆಚ್ಚಾಗುವಂತೆ ಮಾಡುತ್ತದೆ.
8. **ಸಾಮಾಜಿಕ ಬಂಡವಾಳ**: ಸ್ವಸಹಾಯ ಗುಂಪುಗಳಲ್ಲಿ ಜನರು ನಿಯಮಿತವಾಗಿ ಭೇಟಿಯಾಗುವದು ಮತ್ತು ಸದಸ್ಯರು ತಮ್ಮ ದಿನನಿತ್ಯದ ಜೀವನದಲ್ಲಿ ಎದುರಿಸುವ ವಿವಿಧ ಸಮಸ್ಯೆಗಳು ಅಥವಾ ಪರಿಹಾರಗಳನ್ನು ಚರ್ಚಿಸುವ ಒಂದು ವೇದಿಕೆಯಾಗಿ ಪರಿಣಮಿಸಿದೆ.

## ಸಂಶೋಧನೆಗಳು ಮತ್ತು ಚರ್ಚೆಗಳು

### ಸ್ವಸಹಾಯ ಗುಂಪುಗಳ ಆದಾಯ ಉತ್ಪಾದಿಸುವ ಚಟುವಟಿಕೆಗಳು

ಸ್ವಸಹಾಯ ಗುಂಪುಗಳ (ಖಊಉ) ವಿಧಾನವು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಒಂದು ಹೊಸ ನಿದರ್ಶನವಾಗಿದ್ದು, ಇದು ಸುಸ್ಥಿರ ಸಮುದಾಯ ಆಧಾರಿತ ಸಂಸ್ಥೆಗಳನ್ನು ರಚಿಸುವ ಮೂಲಕ, ಗ್ರಾಮೀಣ ಬಡವರ ಜೀವನ ಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ವಹಿಸುವ ಮೂಲಕ ಮಹಿಳೆಯರು ವಿಭಿನ್ನ ಜೀವನೋಪಾಯ ಚಟುವಟಿಕೆಗಳ ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಇದು ಹೊಸ ವೇದಿಕೆಯಾಗಿ ಪರಿಣಮಿಸಿದೆ. ಸ್ವಸಹಾಯ ಗುಂಪುಗಳು ವಿವಿಧ ಆದಾಯ ಉತ್ಪಾದಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಸಾಮಾನ್ಯವಾಗಿ ಸಾಂಪ್ರದಾಯಿಕ ಜ್ಞಾನ ಮತ್ತು ಸ್ಥಳೀಯ ಸಂಪನ್ಮೂಲಗಳ ಲಭ್ಯತೆಯನ್ನು ಆಧರಿಸಿ ಚಟುವಟಿಕೆಯನ್ನು ಪ್ರಾರಂಭಿಸುತ್ತದೆ. ಪುರುಷ ಮತ್ತು ಮಹಿಳಾ ಸದಸ್ಯರನ್ನು ಒಳಗೊಂಡಿರುವ ಇತರ ಸಂಘಟನೆಗಳಿಗಿಂತ ಭಿನ್ನವಾಗಿ, ಸ್ವಸಹಾಯ ಗುಂಪುಗಳ ಫಲಾನುಭವಿಗಳು ಹೆಚ್ಚಾಗಿ ಆರ್ಥಿಕ ಉತ್ಪಾದನಾ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. ಮುಖ್ಯವಾಗಿ ಈ ಗುಂಪುಗಳು ಹೆಚ್ಚಿನ ಚಟುವಟಿಕೆಗಳು ಪ್ರಾಥಮಿಕವಾಗಿ ಗುಡಿ ಕೈಗಾರಿಕೆಗಳು ಮತ್ತು ಕೃಷಿ ಆಧರಿತ ಆರ್ಥಿಕತೆಗೆ ಸಂಬಂಧಿಸಿದ್ದಾಗಿರುತ್ತವೆ.

**ಪ್ರತಿ ಆರ್ಥಿಕ ಚಟುವಟಿಕೆಯಿಂದ ಬರುವ ಆದಾಯದ ಮಾದರಿ**

ಸ್ವಸಹಾಯ ಗುಂಪುಗಳಿಗೆ ವಿವಿಧ ಏಜೆನ್ಸಿಗಳು ಮತ್ತು ಸಂಸ್ಥೆಗಳು ಹಣಕಾಸು ಸೌಲಭ್ಯಗಳನ್ನು ಒದಗಿಸುತ್ತವೆ ಮತ್ತು ಬೆಂಬಲವನ್ನು ನೀಡುತ್ತವೆ. ಸ್ವಸಹಾಯ ಗುಂಪನ್ನು ನಿರ್ವಹಿಸಲು ಪ್ರತಿ ಸ್ವಸಹಾಯ ಗುಂಪುಗಳಿಗೆ ಒಂದು ಬಾರಿ ಅನುದಾನವಾಗಿ ಹಣವನ್ನು ನೀಡಲಾಗುತ್ತದೆ. ನಂತರ, ಪ್ರತಿ ಸ್ವಸಹಾಯ ಗುಂಪುಗಳು ತಮ್ಮ ಆಂತರಿಕ ಸಾಲದ ಮೊತ್ತವನ್ನು ಹೊಂದಿ, ಆ ಮೊತ್ತವನ್ನೇ ಸಾಲದ ಮೂಲಕ ತನ್ನ ಸದಸ್ಯರಿಗೆ, ತಿಂಗಳಿನ ಬಡ್ಡಿದರದೊಂದಿಗೆ ಸ್ವಸಹಾಯ ಗುಂಪು ನಿಯಂತ್ರಿಸಲ್ಪಡುತ್ತದೆ. ಈ ಪ್ರಕ್ರಿಯೆಯು, ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ವಿವಿಧ ಆದಾಯ–ಉತ್ಪಾದಿಸುವ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ. ರಾಷ್ಟ್ರದ ಅಭಿವೃದ್ಧಿಯು ಭೌತಿಕ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ.

**ಗ್ರಾಮೀಣಾಭಿವೃದ್ಧಿಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರ**

ಸ್ವಸಹಾಯ ಗುಂಪುಗಳು ಹೆಚ್ಚಾಗಿ ಹಿಂದುಳಿದ ಮತ್ತು ಅಭಿವೃದ್ಧಿಯಾಗದ ಪ್ರದೇಶಗಳಲ್ಲಿ ಸ್ಥಾಪಿತವಾಗಿದ್ದು, ಈ ಪ್ರದೇಶಗಳ ಜನರು ಅನಕ್ಷರತೆ, ಬಡತನ, ಕೌಶಲ್ಯದ ಕೊರತೆ ಮತ್ತು ಆರೋಗ್ಯದ ಸಮಸ್ಯೆ, ಮೂಲಸೌಕರ್ಯ ಇತ್ಯಾದಿಗಳಿಗೆ ಸಂಬಂಧಿಸಿದ, ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ವಸಹಾಯ ಗುಂಪುಗಳ ಪ್ರಾರಂಭದ ನಂತರ, ಸ್ವಸಹಾಯ ಗುಂಪುಗಳು ಗುಂಪು ಪ್ರಯತ್ನಗಳ ಮೂಲಕ ಈ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಸಮಸ್ಯೆಗಳನ್ನು ಏಕಾಂಗಿಯಾಗಿ ನಿರ್ವಹಿಸುವುದು ಕಷ್ಟ, ಆದರೆ ಗುಂಪಾಗಿ ಒಗ್ಗೂಡಿದಾಗ ಸುಲಭವಾಗಿ ಪರಿಹರಿಸಲು ಸಹಾಯಕವಾಗುತ್ತದೆ. ಆದ್ದರಿಂದ ಈ ಪ್ರದೇಶದ ಸ್ವಸಹಾಯ ಗುಂಪುಗಳು ಗ್ರಾಮೀಣ ಬಡವರಿಗೆ ಬದಲಾವಣೆಯ ಸಾಧನವಾಗಿ ಪರಿಣಮಿಸುತ್ತಿವೆ. ಪ್ರಸ್ತುತ ಅಧ್ಯಯನವು ಸ್ವಸಹಾಯ ಗುಂಪುಗಳು ಬಡವರು ಮತ್ತು ಸಮಾಜದ ಅಂಚಿನಲ್ಲಿರುವ ವರ್ಗಗಳನ್ನು ಸಂಘಟಿಸಿ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗಾಗಿ ಒಟ್ಟಾಗಿ ಕೆಲಸ ಮಾಡಲು ಸಮರ್ಥವಾಗಿವೆ.

**ಗ್ರಾಮೀಣ ಪ್ರದೇಶಗಳಲ್ಲಿ ಸ್ವಸಹಾಯ ಗುಂಪುಗಳು ನಿರ್ವಹಿಸಿದ ಕೆಲವು ಪಾತ್ರಗಳು ಇಲ್ಲಿವೆ.**

ಮೊದಲನೆಯದಾಗಿ, ಸ್ವಸಹಾಯ ಗುಂಪುಗಳು ಗ್ರಾಮೀಣ ಬಡವರಿಗೆ ಸ್ವಉದ್ಯೋಗವನ್ನು ಒದಗಿಸುತ್ತವೆ, ಇದರಿಂದಾಗಿ ಅವರು ತಮ್ಮ ತುರ್ತು ಅಗತ್ಯತೆಗಳನ್ನು ಪೂರೈಸಿಕೊಳ್ಳಲು, ನಿರಂತರ ಆದಾಯವನ್ನು ಪಡೆಯುತ್ತಾರೆ. ಸದಸ್ಯರ ಶೈಕ್ಷಣಿಕ ಮಟ್ಟಕ್ಕೆ ಸಂಬಂಧಿಸಿದಂತೆ, ಸಾಮಾನ್ಯವಾಗಿ ಗುಂಪಿನ ಸದಸ್ಯರು ಅನಕ್ಷರಸ್ಥರಾಗಿದ್ದು, ಕೆಲವೊಂದು ಸದಸ್ಯರು ಮಾತ್ರ ಕಡಿಮೆ ಶಿಕ್ಷಣ ಪಡೆದಿರುವವರಾಗಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಕಡಿಮೆ ಮಟ್ಟದ ಸಾಕ್ಷರತೆಯು ಬಡವರಿಗೆ ಉದ್ಯೋಗವನ್ನು ಹುಡುಕಲು ಕಷ್ಟಕರವಾಗಿಸುತ್ತದೆ. ಆದರೆ ಸ್ವಸಹಾಯ ಗುಂಪುಗಳಲ್ಲಿ ಭಾಗವಹಿಸುವುದರಿಂದ ಸದಸ್ಯರು ಸ್ವಉದ್ಯೋಗದ ಜೊತೆಗೈ ಆರ್ಥಿಕ ಸಬಲತೆ ಹೊಂದಿ, ಉತ್ತಮ ಜೀವನವನ್ನು ಹೊಂದಲು ಅವಕಾಶವನ್ನು ನೀಡುತ್ತದೆ.

ಎರಡನೆಯದಾಗಿ, ಸಾಮಾನ್ಯವಾಗಿ ಸ್ವಸಹಾಯ ಗುಂಪುಗಳ ಫಲಾನುಭವಿಗಳು, ಸ್ವಸಹಾಯ ಗುಂಪುಗಳಿಗೆ ಸೇರುವ ಮೊದಲು, ಯಾವುದೇ ಆದಾಯವಿಲ್ಲದೆ ಕೇವಲ ಮನೆಯ ಚಟುವಟಿಕೆಯನ್ನು

ಮಾಡುವ ಗೃಹಿಣಿಯರಾಗಿರುವುದನ್ನು ಕಾಣಬಹುದು. ಆದರೆ ಈಗ ಈ ಗೃಹಿಣಿಯರು ತಮ್ಮ ಕುಟುಂಬಗಳಿಗೆ ಅಗತ್ಯದ ಸಮಯದಲ್ಲಿ ಆರ್ಥಿಕವಾಗಿ ಸಹಾಯ ಮಾಡಲು ಸಮರ್ಥರಾಗಿದ್ದಾರೆ ಜೊತೆಗೆ ಅವರು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಗೌರವವನ್ನು ಪಡೆಯಲು ಸಹ ಸಮರ್ಥರಾಗಿದ್ದಾರೆ.

ಮೂರನೆಯದಾಗಿ, ಗ್ರಾಮೀಣ ಪ್ರದೇಶದ ಹೆಚ್ಚಿನ ಮಹಿಳೆಯರು ಹಣದ ನಿರ್ವಹಣೆಯ ಬಗ್ಗೆ ಬಹಳ ಕಡಿಮೆ ಜ್ಞಾನವನ್ನು ಹೊಂದಿರುವುದರಿಂದ, ಅವರು ಹಣ ನಿರ್ವಹಣೆಯ ಜೊತೆಗೆ ಅನೇಕ ವಿಷಯಗಳನ್ನು ಕಲಿಯಲು ಪರಸ್ಪರ ಸಹಾಯ ಮಾಡಲು ಮತ್ತು ಮಹಿಳೆಯರು ಕೌಶಲ್ಯಗಳನ್ನು ಹೊಂದಿ ಜೀವನವನ್ನು ಸುಧಾರಿಸಿಕೊಳ್ಳಲು ಸ್ವಸಹಾಯ ಗುಂಪುಗಳು ಸಹಾಯಕವಾಗಿವೆ.

ನಾಲ್ಕನೆಯದಾಗಿ, ಸ್ವಸಹಾಯ ಗುಂಪುಗಳು ಹಳ್ಳಿಯ ಬಡ ಜನರಿಗೆ ತಮ್ಮ ಉಳಿತಾಯವನ್ನು ಸಾಮಾನ್ಯ ನಿಧಿಯಲ್ಲಿ ಸಂಗ್ರಹಿಸುವ ಮೂಲಕ ಬೃಹತ್ ಪ್ರಮಾಣದ ಹಣವನ್ನು ಉಳಿತಾಯ ಮಾಡಲು ಸಹಾಯ ಮಾಡುತ್ತವೆ, ಇದನ್ನು ನಂತರ ಗುಂಪು ಅಥವಾ ಗುಂಪಿನ ಸದಸ್ಯರು ಉತ್ಪಾದಕ ಹೂಡಿಕೆಗಾಗಿ ಬಳಸಬಹುದು. ಒಂದು ವೇಳೆ, ಬಡವರು ಪ್ರತ್ಯೇಕವಾದ ಗುಂಪಿನ ಮೂಲಕ ಸಣ್ಣ ಮೊತ್ತದ ಉಳಿತಾಯವನ್ನು ಮಾತ್ರ ಉಳಿಸಬಹುದು, ಇದು ಸಾಮಾನ್ಯವಾಗಿ ಹೂಡಿಕೆಗೆ ಸಾಕಾಗುವುದಿಲ್ಲ. ಆದ್ದರಿಂದ ಇಂತಹ ಸಂಧರ್ಭದಲ್ಲಿ, ಸ್ವಸಹಾಯ ಗುಂಪುಗಳು ಗುಂಪು ಮಟ್ಟದಲ್ಲಿ ಮಹಿಳೆಯರು ಭಾಗವಹಿಸುವಿಕೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಅವರ ಸಾಮಾಜಿಕ ಸಬಲೀಕರಣದ ಮಟ್ಟವನ್ನು ಹೆಚ್ಚಿಸುತ್ತವೆ. ಇದರಿಂದ ಸ್ವಸಹಾಯ ಗುಂಪುಗಳಲ್ಲಿ, ಎಲ್ಲಾ ಸದಸ್ಯರು ಸಭೆ ಮತ್ತು ಆದಾಯ ಗಳಿಸುವ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಲಾಗುತ್ತದೆ. ಇದು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮತ್ತು ಕುಟುಂಬದ ಮಟ್ಟದಲ್ಲಿ ಹಾಗೂ ಬಾಹ್ಯ ಪರಿಸರದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರಿಗೆ ವಿಶ್ವಾಸ ಮತ್ತು ತಿಳುವಳಿಕೆಯನ್ನು ನೀಡುತ್ತದೆ.

**ಸಲಹೆಗಳು ಮತ್ತು ತೀರ್ಮಾನ.**

ಸ್ವಸಹಾಯ ಗುಂಪುಗಳ ಸುಧಾರಣೆ ಮತ್ತು ಮುಂದಿನ ಅಭಿವೃದ್ಧಿಗೆ ಕೆಲವು ಸಲಹೆಗಳು.

1. ಸ್ವಸಹಾಯ ಗುಂಪುಗಳ ಸದಸ್ಯರಲ್ಲಿ ಉತ್ತಮ ತಿಳುವಳಿಕೆ ಬೆಳೆದು ಬರಬೇಕು.
2. ಸ್ವಸಹಾಯ ಗುಂಪುಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಜವಾಬ್ದಾರಿಗಳನ್ನು ವಹಿಸಿಕೊಳ್ಳುವಂತಹ ಸುಶಿಕ್ಷಿತ ವ್ಯಕ್ತಿಯಾಗಿರಬೇಕು.
3. ಸ್ವಸಹಾಯ ಗುಂಪುಗಳ ಮಾರುಕಟ್ಟೆ ಜಾಲಗಳನ್ನು ಹೆಚ್ಚು ವಿಸ್ತರಿಸಬೇಕು ಇದರಿಂದ ಸರಕುಗಳನ್ನು ಸೂಕ್ತವಾದ ಬೆಲೆಗೆ ಮಾರಾಟ ಮಾಡಬಹುದು
4. ಸ್ವಸಹಾಯ ಗುಂಪುಗಳ ಚಟುವಟಿಕೆಗಳು ಉತ್ತಮ ಲಾಭವನ್ನು ನೀಡುವ ಚಟುವಟಿಕೆಗಳಾಗುವಂತೆ ಹೆಚ್ಚು ಗಮನಹರಿಸಬೇಕು.
5. ಸ್ವಸಹಾಯ ಗುಂಪುಗಳು ಗ್ರಾಮೀಣ ಮಹಿಳೆಯರಿಗೆ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವಂತಾಗಬೇಕು.

6. ಸ್ವಸಹಾಯ ಗುಂಪುಗಳಿಗೆ ಕಾನೂನಾತ್ಮಕ ಚೌಕಟ್ಟಿನ ಅವಶ್ಯಕತೆ ಇದ್ದು, ಸಮಾಜದಲ್ಲಿರುವ ಶ್ರೀಮಂತರು ಮತ್ತು ಬಂಡವಾಳಶಾಹಿಗಳ ವಂಚಕ ಹಣಕಾಸು ಜಾಲ(ನಕಲಿ ಫೈನಾನ್ಸ ಸಂಸ್ಥೆಗಳು)ದಿಂದ ಸ್ವಸಹಾಯ ಗುಂಪುಗಳಿಗೆ ರಕ್ಷಣೆ ನೀಡಬೇಕು.

ಈ ಅಧ್ಯಯನ ಕ್ಷೇತ್ರದಲ್ಲಿನ ಸ್ವಸಹಾಯ ಗುಂಪುಗಳು, ಬಡವರು ಮತ್ತು ಸಮಾಜದ ಅಂಚಿನಲ್ಲಿರುವ ಮಹಿಳೆಯರನ್ನು, ಸ್ವಸೇವೆಯೊಂದಿಗೆ ಆರ್ಥಿಕ ಸಂಸ್ಥೆಯಾಗಿ ಸಂಘಟಿಸುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಇಡೀ ಅವಲೋಕನವು ತೋರಿಸುತ್ತದೆ. ಗ್ರಾಮೀಣ ಪ್ರದೇಶದ ಮಹಿಳೆಯರ ಜೀವನ ಶೈಲಿಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ. ಅದಾಯ ಉತ್ಪನ್ನದ ಚಟುವಟಿಕೆಗಳನ್ನು ಆರಂಭಿಸಲು ಮತ್ತು ಮಾರುಕಟ್ಟೆಯ ಜಾಲಗಳನ್ನು ನಿರ್ಮಿಸುವಲ್ಲಿ ಸ್ವಸಹಾಯ ಗುಂಪುಗಳು ಗ್ರಾಮೀಣ ಬಡವರಿಗೆ ಮತ್ತು ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಸಹಾಯವಾಗಿವೆ.

ಗ್ರಾಮೀಣ ಪ್ರದೇಶಗಳಲ್ಲಿ ಹಲವು ಅಡೆತಡೆಗಳ ಹೊರತಾಗಿಯೂ, ಸ್ವಸಹಾಯ ಗುಂಪುಗಳ ರಚನೆಯು ಗ್ರಾಮೀಣ ಬಡವರ ಜೀವನೋಪಾಯ ಚಟುವಟಿಕೆಗಳ ಅವಕಾಶಗಳನ್ನು ಹೆಚ್ಚಿಸುವಲ್ಲಿ ಬಹಳ ಸಹಾಯಕವಾಗಿದೆ. ಆದ್ದರಿಂದ, ಸ್ವಸಹಾಯ ಗುಂಪುಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯು, ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಪ್ರಕ್ರಿಯೆಗೆ ಕೊಡುಗೆ ನೀಡುವ ಸ್ವಸಹಾಯ ಗುಂಪುಗಳ ಸದಸ್ಯರಲ್ಲಿ ಸ್ವಾವಲಂಬಿನೆ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಸಬಲೀಕರಣದ ಅಭಿವೃದ್ಧಿಗೆ ಅಗಾಧ ಕೊಡುಗೆಯನ್ನು ನೀಡುತ್ತದೆ ಎಂದು ತೀರ್ಮಾನಿಸಬಹುದು.

ಗ್ರಾಮೀಣ ಮಟ್ಟದಲ್ಲಿನ ಸಮಾಜ ಮತ್ತು ಅದರ ಆರ್ಥಿಕತೆಯಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರುವಲ್ಲಿ ಸ್ವಸಹಾಯ ಗುಂಪುಗಳು ಪ್ರಮುಖ ಪಾತ್ರ ವಹಿಸಿವೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸ್ವಸಹಾಯ ಗುಂಪು ವಹಿಸಿದ ಬಹುಮುಖ ಪಾತ್ರವನ್ನು ಪರಿಗಣಿಸಿ, ಸರ್ಕಾರವು ಸ್ವಸಹಾಯ ಗುಂಪುಗಳನ್ನು ಬೆಂಬಲಿಸುವ ಮೂಲಕ ಮತ್ತು ಅವುಗಳಿಗೆ ಸಂಭಂಧಿತ ಕಾರ್ಯಕ್ರಮಗಳನ್ನು ರೂಪಿಸುವುದರೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಬೆಂಬಲಿಸುವ ಅಗತ್ಯವಿದೆ ಎಂದು ತೀರ್ಮಾಣಿಸಲಾಗಿದೆ.

**ಉಪಸಂಹಾರ**

ಭಾರತದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗಣನೀಯ ಪ್ರಮಾಣದಲ್ಲಿ ಬಡವರಿದ್ದಾರೆ. ಅವರು ವೈಯಕ್ತಿಕವಾಗಿ ಎಷ್ಟೇ ಪ್ರಯತ್ನಿಸಿದರೂ ಬಡತನದಿಂದ ಹೊರಬರಲು ಸಾಧ್ಯವಾಗಿಲ್ಲ. ಆದ್ದರಿಂದ, ಬಡತನ ಹೋಗಲಾಡಿಸಲು ಮತ್ತು ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಲು ಸಾಮೂಹಿಕ ಪ್ರಯತ್ನದ ಅಗತ್ಯವಿದೆ. ಸ್ವಉದ್ಯೋಗ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ, ಬಡ ವರ್ಗಗಳಿಗೆ ಸಾಲ ಸೌಲಭ್ಯಗಳ ಅಗತ್ಯವಿದೆ. ವೈಯಕ್ತಿಕ ಪ್ರಯತ್ನಗಳಿಗಿಂತ ಸ್ವಸಹಾಯ ಗುಂಪುಗಳಲ್ಲಿ ಯಶಸ್ವಿ ಆದಾಯ ಗಳಿಕೆಯ ಅವಕಾಶ ಹೆಚ್ಚಾಗಿರುತ್ತದೆ. ಇದರಿಂದ ಸ್ವಸಹಾಯ ಗುಂಪುಗಳು ಗ್ರಾಮೀಣ ಬದುಕನ್ನು ಸುಧಾರಿಸುವುದರ ಜೊತೆಗೆ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸಿ, ಅವರನ್ನು ಸಬಲೀಕರಣದ ಹಾದಿಯನ್ನು ತಲುಪಿಸುತ್ತಿವೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು.**


- ಬಣಕಾರ್ ಎಮ್., ಸಿ.ಎಸ್,ಯತ್ನಳ್ಳಿ. (2008). *ಸೆಲ್ಫ್ ಹೆಲ್ಪ್ ಗ್ರೂಪ್ಸ್ ಆಂಡ್ ಎಂಪವರ್ಮೆಂಟ್ ಆಫ್ ವುಮೆನ್ ಎ ಕೇಸ್ ಸ್ಟಡಿ ಆಫ್ ಹಾವೇರಿ ಡಿಸ್ಟ್ರಿಕ್.*
- ಭಾರತಿ ಪಾಟೀಲ. (2008). *ಮಹಿಳಾ ಸಬಲೀಕರಣದಲ್ಲಿ ಅಥಣಿ ತಾಲೂಕು ಸ್ವಸಹಾಯ ಸಂಘಗಳು,* ಎಂ.ಫಿಲ್ ಸಂಶೋಧನಾ ಗ್ರಂಥ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗುದಗನವರ ರಾಜಶ್ರೀ. (2011). ಗ್ರಾಮೀಣ ಅಭಿವೃದ್ಧಿಯಲ್ಲಿ ಕಿರು ಹಣಕಾಸು ಸಂಸ್ಥೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ನೆಡುಮಾರ್ ಎಸ್. ಪಳನಿಸ್ವಾಮಿ.ಕೆ. (2001). ಇವರ ಪರ್‌ಪಾರ್‌ಮೆನ್ಸ ಆಂಡ್ ಇಂಪ್ಯಾಕ್ಟ ಆಫ್ ಸೆಲ್ಪ್ ಹೆಲ್ಪ ಗ್ರೂಪ್ಸ ಇನ್ ತಮಿಳುನಾಡು, ಇಂಡಿಯನ್ ಜರ್ನಲ್ ಆಫ್ ಅಗ್ರಿಕಲ್ಚರ್.
- ನಾಗರಾಜ, ಜಿ.ಎಚ್., ಎಂ.ಡಿ. ಉಮೇಶ., (2018). *ಗ್ರಾಮ ಸ್ವರಾಜ್ಯ ಪರಿಕಲ್ಪನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರ.* ಶ್ರೀಕ್ಷೇತ್ರ ಪ್ರಕಾಶನ, ಮೈಸೂರು.
- ವೆಂಕಯ್ಯ ಅಪ್ಪಗೆರೆ. (2000). ಗ್ರಾಮೀಣ ಮಹಿಳಾ ಅಭಿವೃದ್ಧಿಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರ, ಕನ್ನಡ ವಿಶ್ವವಿದ್ಯಾಲಯ.
- ಜೈನ್ ಆಂಡ್ ನೈ, (2013). ಸೆಲ್ಪ್ ಹೆಲ್ಪ ಗ್ರೂಪ್ಸ ಹೆಲ್ಪಿಂಗ್ ಎಂಪವರ್ ರೂರಲ್ ವುಮೆನ್ ಎ ಸ್ಟಡಿ, *ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸೋಷಿಯಲ್ ಸೈನ್ಸ ಆಂಡ್ ಇಂಟರ್‌ಡಿಸಿಪ್ಲಿನರಿ ರಿಸರ್ಚ್*, 2013.
- ಶರ್ಮಾ. (2012). ವುಮೆನ್ ಎಂಪವರಮೆಂಟ್ ಥ್ರೋ ಮೈಕ್ರೋ ಪೈನಾನ್ಸ್ ಆಂಡ್ ಸೆಲ್ಪ್ ಹೆಲ್ಪ್ ಗ್ರೂಪ್ಸ್, ಸೋನಾಲಿ ಪಬ್ಲಿಕೇಷನ್, ನ್ಯೂ ದೆಹಲಿ, 2012.